Sri J. B. MALLARADHYA.—Are the Government aware that this stadium is being called in the name of the late Yuvaraja of Mysore and a sum of two lakhs has been contributed by the public and that despite a promise of the Government that it will be completed within two or three years, they have taken more than five years?

Sri ANNA RAO GANAMUKHI.—Money has been utilised for the same purpose and work has been delayed.

1-30 P.M.

Sri H. V. KOUJALGI.—May I know whether the amount for the construction of the stadium is going to be paid out of Government funds or Corporation funds?

Sri ANNA RAO GANAMUKHI.—Not Corporation funds. Rs. 2 lakhs are going to be met from public donations and the other amount by the Government.

Sri K. HANUMANTHAIYA.—Has any name been given to the stadium?

Sri ANNA RAO GANAMUKHI.—Yes, Kanteerava Stadium.

Sri K. HANUMANTHAIYA.—Then, why has it not been mentioned in the answers given?

Sri ANNA RAO GANAMUKHI.—May be, by oversight.

Sri K. HANUMANTHAIYA.—Is the Government aware that naming of this stadium is still under correspondence,

Sri ANNA RAO GANAMUKHI.—No.

Sri V. P. DEENADAYALU NAIDU.—Has the stadium maintained turf tract?

Sri ANNA RAO GANAMUKHI.—Turf tract has been completed and cycle tract is also completed.

Sri V. P. DEENADAYALU NAIDU.—Not the question of completion. After completion the whole thing has deteriorated by not being put to use. Are you maintaining the tracts?

Sri ANNA RAO GANAMUKHI.—Now the question of maintenance does not arise. When the Public Works Department hands it over to the Education Department, that question will be taken by separately. The Education Department is bound to maintain it.

Sri S. D. KOTHAVALE.—May I know whether games like cricket can be played there?

Sri ANNA RAO GANAMUKHI.—In the very nature of the game, it cannot be played.

Sri K. HANUMANTHAIYA.—The stadium is already there for the last ten and odd years. The field has to be maintained. It is only the question of additional space.

Sri ANNA RAO GANAMUKHI.—The stadium is there, no doubt. But the ground is flushy; unless we prepare it, it cannot be used in the rainy season.

Repairs to Minor and Major Tanks in Channagiri Taluk.

Q.—1807. Sri KUNDUR RUDRAPPA (Channagiri).—

Will the Government be pleased to state:—

(*a*) the number of minor and major tanks in Channagiri Taluk together with the extent of their atchkat;

(*b*) out of them, the number of tanks that are in disrepair;

(*c*) the number of cattle troughs existingin different villages of the above taluk?

A.—Sri H. M. CHANNABASAPPA (Minister for Public Works and Electricity).—

(*a*)—	*Atchkat.*
(i) Major Tanks : 21 ...	4828 Acres 19 Guntas
(ii) Minor Tanks : 170 ...	3689 Acres 14 Guntas

(*b*)—

(i) 2 Major Tanks.

(ii) 91 Minor Tanks.

(*c*) 79.

ಶ್ರೀ ಕುಂದೂರು ರುದ್ರಪ್ಪ.—ಚನ್ನಗಿರಿ ತಾಲ್ಲೂಕಿನಲ್ಲಿರುವ 170 ಮೈನರ್ ಕೆರೆಗಳ ಪೈಕಿ 91 ಕೆರೆಗಳು ನಾದುರಸ್ತಾಗಿರು ಕಾರಣವೇನು? ಜಾಗ್ರತೆ ದುರಸ್ತು ಮಾಡಿಸುತ್ತೀರಾ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಾದುರಸ್ತಿ ದುಡೇ ಕಾರಣ; ಅವುಗಳನ್ನು ದುರಸ್ತು ಮಾಡ ಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಕುಂದೂರು ರುದ್ರಪ್ಪ.—ಜಾಗ್ರತೆ ದುರಸ್ತು ಮಾಡಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯೋಗ್ಯ ಮಾರ್ಗದಲ್ಲಿ ಪರಿಶೀಲನೆ ಮಾಡಿ, ಯಾವ ಯಾವುದನ್ನು ಮಾಡಿಸಬೇಕೆಂದು ನಿರ್ಧರಿಸಿ ಮಾಡಿಸುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—'ಸಿ' ಪ್ರಶ್ನೆಗೆ ಉತ್ತರವಾಗಿ 79 ಬಾನೆಗಳಿವೆ ಎಂದು ಹೇಳುತ್ತೀರಿ; ಇವುಗಳನ್ನು ಸರ್ಕಾರದವರೇ ರಿಪೇರಿ ಮಾಡಿಸುತ್ತಾರೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ. ಸಾರ್ವಜನಿಕರೇ ಅವರವರ ಅನುಕೂಲತೆಗೆ ತಕ್ಕಂತೆ ರಿಪೇರಿ ಮಾಡಿಸುತ್ತಿದ್ದಾರೆ.

ಶ್ರೀ ಕುಂದೂರು ರುದ್ರಪ್ಪ.—ಗೋಮಾಳಗಳನ್ನು ವಿಲೇ ಮಾಡಿದರು: ಜಾನುವಾರುಗಳು ನೀರನ್ನಾದರೂ ಕುಡಿದು ಬದುಕುವಂತೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರಾವರಿಗೆ ಅನುಕೂಲವಾಗುವ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು ಅಥವ ರಿಪೇರಿ ಮಾಡುವುದೂ ಕುಡಿಯುವ ನೀರಿನ ಕೆರೆಗಳನ್ನು ರಿಪೇರಿ ಮಾಡುವುದೂ, ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟವು, ಎರಡಕ್ಕೂ ಸಂಬಂಧವಿಲ್ಲ.

ಶ್ರೀ ಕೆ.ಪಿ. ರೇವಣ್ಣಸಿದ್ದಪ್ಪ.—ನಾದುರಸ್ತಾಗಿರುವುದಕ್ಕೆ ಸರ್ಕಾರದ ಔದಾಸೀನ್ಯವೇ ಕಾರಣವಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೈತರ ಔದಾಸೀನ್ಯವೇ ಕಾರಣ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದು ಹೇಗೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆರೆಕಟ್ಟೆಗಳನ್ನು ಸಾರಾಬಾದು ರಿಪೇರಿ ಮಾಡಿಕೊಂಡು ಬರುವುದು ರೈತರ ಮೇಲೆ ಬಿದ್ದಿರುವ ಜವಾಬ್ದಾರಿ, ಅವರು ಅನೇಕ ವರ್ಷಗಳಿಂದ ಉಪೇಕ್ಷೆ ಮಾಡಿದುದರಿಂದ ಈ ಕೆರೆಗಳು ನಾದುರಸ್ತಾಗಿವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತೂಬು ಮತ್ತು ಕೋಡಿ ರಿಪೇರಿ ಮಾಡುವುದು ರೈತರ ಕೆಲಸವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾರಾಬಾದು, ಎಂದರೆ ವರ್ಷವರ್ಷವೂ ಕಾಮಗಾರಿಗಳನ್ನು ಮಾಡದೇ ಹೋದರೆ ನಾದುರಸ್ತಾಗುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಎಷ್ಟು ದೊಡ್ಡ ಕೆರೆಗಳು ನಾದುರಸ್ತಾಗಿವೆ ಎಂದು ಹೇಳಿದಿರಿ, ಅವು ಯಾವುವು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಸರುಗಳನ್ನು ಬೇಕಾದರೆ ಆ ಮೇಲೆ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ; ಪಟ್ಟಿಯಲ್ಲಿದೆ.

Asphalting of Roads in Hassan District.

Q.—1891. Sri B. N. BORANNA GOWDA (Belur).—

Will the Government be pleased to state:—

(*a*) the number of miles of asphalt done for year 1956-57 in each Sub-Division of the P.W.D. in Hassan District;

(*b*) the number of miles left for want of allotments in each Sub-Division?

A.—Sri H. M. CHANNABASAPPA (Minister for Public Works and Electricity).—

(*a*)—	*Miles.*
No. 1 Sub-Dn., Hassan	42 3/8
No. 2 Sub-Dn., Saklespur	13 7/8
No. 3 Sub-Dn., Belur	13 1/4
No. 4 Sub-Dn., Channarayapatna	12 1/2
No. 5 Sub-Dn., Holenarasipur	4
Total	86

(*b*) No length was left over for want of allotment in any of the Sub-Divisions.

ಶ್ರೀ ಬಿ. ಎಚ್. ಬೋರಣ್ಣಗೌಡ.—1956-57ರಲ್ಲಿ ಹಾಸನ ಜಿಲ್ಲೆಯಲ್ಲಿ 86 ಮೈಲಿಗಳಿಗೆ ಆಸ್‌ಫಾರ್ಟ್ ಮಾಡಿದೆಯೆಂದು ಹೇಳಿದೆ, 1957-58ರಲ್ಲಿ ಎಷ್ಟು ಮೈಲಿಗೆ ಮಂಜೂರಾಗಿದೆ?

ಅಧ್ಯಕ್ಷರು.—ಕೇಳಿರುವುದು 1956-57ಕ್ಕೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗಿದ್ದರೆ ಆ ವರ್ಷಕ್ಕೆ ಮಂಜೂರಾಗಿರುವುದು ಎಷ್ಟು ಮೈಲಿ?

*ಶ್ರೀ ಎಚ್. ಎಂ. ಚನ್ನಬಸಪ್ಪ. 110 ಮೈಲಿಗೆ ಮಾಡಬೇಕೆಂದು ಅವಕಾಶ ಮಾಡಿದ್ದೆವು, ಇದರಲ್ಲಿ 86 ಮೈಲಿಗಳಿಗೆ ಆಗಿದೆ; ಉಳಿದದ್ದು 24 ಮೈಲಿ.

ಶ್ರೀ ಬಿ. ಎಚ್. ಬೋರಣ್ಣಗೌಡ.—24 ಮೈಲಿ ರಸ್ತೆಯನ್ನು ಏಕೆ ಮಾಡದೆ ಬಿಟ್ಟದ್ದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನು ಒದಗದೆಯಿದ್ದುದು ಒಂದು ಕಾರಣ; ಅಲ್ಲದೆ ಅಲ್ಲಿ ಕೆಲಸ ಮಾಡುವ ಕಾಲ ಬಹಳ ಕಡಮೆ. ಬೇಸಿಗೆಯ ಕಾಲದಲ್ಲಿ ಮಾತ್ರ ಮಾಡಬೇಕು. ಮೂರನೆಯದು, ಲೇಬರ್ ತೊಂದರೆ ಬಂದದ್ದು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಚನ್ನರಾಯಪಟ್ಟಣ ತಿಪಟೂರು ರಸ್ತೆಗೆ ಆಸ್‌ಫಾರ್ಟ್ ಮಾಡದೇ ಯಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಉದ್ದೇಶಪೂರ್ವಕವಾಗಿ ನಿಧಾನ ಮಾಡಿಲ್ಲ, ಅನಿವಾರ್ಯದಿಂದ, ಕಲ ಕಡಮೆಯಾದ ಕಾರಣದಿಂದ, ಲೇಬರ್ ಮತ್ತು ಯಂತ್ರೋಪಕರಣಗಳು ಸಿಕ್ಕದೆ ನಿಧಾನವಾಗಿರುತ್ತದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಚನ್ನರಾಯಪಟ್ಟಣದಲ್ಲಿ ಕೇವಲ ಹನ್ನೆರಡೂವರೆ ಮೈಲು ಮಾಡಿರುವುದರಿಂದ ಬಹಳ ಕಡಮೆಯಾಗಿದೆ. ಆದಕಾರಣ ಈ ಸಾರಿಯಾದರೂ 50 ಮೈಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಯೋಜಿತ ಮಾರ್ಗದಲ್ಲಿ, ಇಷ್ಟಿಷ್ಟು ಮಾ ಬೇಕೆಂದು ಕಾರ್ಯಕ್ರಮ ಹಾಕಿಕೊಂಡು ಮಾಡುತ್ತೇವೆ, ಕಾಲಕ್ರಮದಲ್ಲಿ 50 ಮೈಲು ಆಗುತ್ತದೆ.